ಮುಪ್ಪಿನ ಗಂಡನ ಒಲ್ಲೆನೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 461.
2. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page no. 76.
3. **Note:** The Ankita is different in both the books. We have considered book in Ref.1 as standard and taken that Ankita for listing.
4. **Note:** The wordings mentioned without highlights are as per Ref. 1 and the wordings given in yellow highlights are as per Ref. 2. There are few differences in wordings in both these versions.
5. **Note:** These lyrics are not available in the books of Prof. S.K. Ramachandra Rao
6. **Note:** The singer has followed the wordings in Ref. 2

ರಾಗ ಆನಂದಭೈರವಿ ಅಟ ತಾಳ

ಮುಪ್ಪಿನ ಗಂಡನ ಒಲ್ಲೆನು ನಾನು ‖ ಪ ‖	ಮುಪ್ಪಿನ ಗಂಡನ ಒಲ್ಲೆನೆ
ತಪ್ಪದೆ ಪಡಿಪಾಟ ಪಡಲಾರೆನಕ್ಕ ‖ ಅಪ ‖	ತಪ್ಪದೆ ಪಡಿಪಾಟ ಪಡಲಾರೆನವ್ವ
ಉದಯದಲ್ಲೇಳಬೇಕು ಉದಕ ಕಾಸಲು ಬೇಕು	ಉದಯದಲೇಳಬೇಕು ಉದಕ ಕಾಸಲು ಬೇಕು
ಬದಿಯಲ್ಲಿ ನಾನಿದ್ದು ಬಜೆ ಅರೆಯ ಬೇಕು	ಹದನಾಗಿ ಬಜೆಯನು ಅರೆದಿಡಬೇಕು
ಹದನಾಗಿ ಎಲೆ ಸುಣ್ಣ ಅಡಿಕೆ ಕುಟ್ಟಲು ಬೇಕು	ಬದಿಯಲಿ ಎಲೆ ಅಡಿಕೆ ಕುಟ್ಟಿಡಬೇಕು
ಬಿದಿರು ಕೋಲನು ಮುಂದೆ ಇಡಬೇಕಕ್ಕ ‖ 1 ‖	ಬಿದಿರ ಕೋಲು ತಂದು ಮುಂದಿಡಬೇಕು
ಮೆತ್ತನೆ ರೊಟ್ಟಿ ಮುದ್ದೆಯ ಮಾಡಲು ಬೇಕು	ಪಿತ್ತ ವೋಕರಿಕೆ ಮುದುಕರಿಗೆ ವಿಶೇಷವು
ಒತ್ತಿ ಒದರಿ ಕೂಗಿ ಕರೆಯಲು ಬೇಕು	ಹೊತ್ತು ಹೊತ್ತಿಗೆ ಜೊಲ್ಲ ಚೆಲ್ಲಬೇಕು
ವಾಕರಿಕೆಯು ಮೂಗಿನ ಸಿಂಬಳ	ಮೆತ್ತನವೆರಡು ಮುದ್ದಿಯ ಮಾಡಲುಬೇಕು
ಮತ್ತೆ ವೇಳೆಗೆ ಎದ್ದು ತೊಳೆಯಬೇಕಕ್ಕ ‖ 2 ‖	ಒತ್ತೊತ್ತಿ ಕೂಗಿ ಕರೆಯಲು ಬೇಕು
ಗೋಣಿ ಹಾಸಲುಬೇಕು ಬೆನ್ನ ಗುದ್ದಲು ಬೇಕು	ಜಾಡಿ ಹಾಸಬೇಕು ನೋಡಿ ಬಾಡಬೇಕು
ಗೋಣು ಹಿಡಿದು ಮೇಲಕ್ಕೆತ್ತಬೇಕು	ಅಡಿಗಡಿಗೆ ಕಣ್ಣೀರ ಸುರಿಸ ಬೇಕು
ಶ್ರೀನಿಧಿ ಪುರಂದರ ವಿಠಲನ್ನ ನೆನೆಯುತ್ತ	ಒಡೆಯ ಶ್ರೀ ಪುರಂದರ ವಿಠಲನ ನೆನೆಯುತ
ನಾನೊಂದು ಮೂಲೇಲಿ ಒರಗಬೇಕಕ್ಕ ‖ 3 ‖	ಮಿಡಿಗೊಂಡು ಮೂಲೆಗೆ ಒರಗಬೇಕು

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಬಾಳಿನ ಗುಟ್ಟನ್ನು ಬಲ್ಲ ಪುರಂದರ ದಾಸರು ಈ ಹಾಡಿನಲ್ಲಿ ಮುಪ್ಪಿನ ಗಂಡನನ್ನು ಮಾಡಿಕೊಂಡ ತರುಣ ಸ್ತ್ರೀಯ ಕಳವಳವನ್ನು ಪ್ರಕಟಿಸಿದ್ದಾರೆ.

ಪಡಿಪಾಟ = ಕಷ್ಟ, ದುರ್ದೆಸೆ
ಜಾಡಿ = ಉರುಟು ನೂಲಿನಿಂದ ಮಾಡಿದ ಹಾಸುವ ಸಾಧನ
ಮಿಡಿಗೊಂಡು = ಮುದ್ದೆಯಾಗಿ

Classification: Keerthane
Ankita: purandara vittala
Location: NA
Category: Jeevana Darshana, Samsara Jigupse, Sankeerna
Sub-Category: pati, beligge, niru, kannu, hAsige, srinidhi,
Pravachana: NA
Explanation: NA